**ಪಾಠ–7** **ಮೇ 7–13**

# ಅಬ್ರಹಾಮನ ಜೊತೆ ಒಡಂಬಡಿಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 15–19:29; ರೋಮ 4:3,4,9,22; ಗಲಾತ್ಯ 4:21–31; ರೋಮ 4:11,9:9; ಆಮೋಸ 4:11.

**ಸ್ಮರಣವಾಕ್ಯ : "ಅದಕ್ಕೆ ಅಬ್ರಾಮನು–ಕರ್ತನಾದ ಯೆಹೋವನೇ ನೀನು ನನಗೆ ಏನು ಕೊಟ್ಟರೇನು? ನಾನು ಸಂತಾನವಿಲ್ಲದವನಾದ ಕಾರಣ ದಮಸ್ಕದ ಎಲಿಯೇಜರನೇ ನನ್ನ ಮನೆಯ ಬಾಧ್ಯಸ್ಥನಾಗುವವನಲ್ಲಾ ಅಂದನು"** ಆದಿಕಾಂಡ 15:2.

ಆದಿಕಾಂಡ 15ರಲ್ಲಿ ದೇವರು ಅಬ್ರಹಾಮನೊಂದಿಗೆ ಒಡಂಬಡಿಕೆಯನ್ನು ಊರ್ಜಿತಗೊಳಿಸುವ ಪ್ರಮುಖ ಸಂದರ್ಭವನ್ನು ನೋಡುತ್ತೇನೆ. ನೋಹನೊಂದಿಗೆ ಮಾಡಿಕೊಂಡ ನಂತರ ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆಯು ಎರಡನೆಯದು.

ನೋಹನ ಒಡಂಬಡಿಕೆಯೇ ಅಬ್ರಹಾಮನೊಂದಿಗಿನ ಒಡಂಬಡಿಕೆಯು ಕೂಡ ಬೇರೆ ದೇಶಗಳವರನ್ನು ಒಳಗೊಂಡಿದೆ ಮತ್ತು ಅಂತಿಮವಾಗಿ, ಸಕಲ ಮಾನವರಿಗೆ ಕೊಡಲಾದ ನಿತ್ಯವಾದ ಒಡಂಬಡಿಕೆಯನ್ನು (ಆದಿಕಾಂಡ 17:7, ಇಬ್ರಿಯ 13:20) ಅಬ್ರಹಾಮನೊಂದಿಗೆ ಒಡಂಬಡಿಕೆಯು ಒಳಗೊಂಡಿದೆ.

ಅಬ್ರಹಾಮನ ಜೀವಿತದ ಈ ಭಾಗದಲ್ಲಿ ಭಯ ಮತ್ತು ನಗುವು ತುಂಬಿರುವುದು. ಅಬ್ರಾಮ, ಸಾರಳು ಮತ್ತು ಹಾಗರಳು ಭಯಭೀತರಾಗಿರುವರು (ಆದಿ 15:11,

* **ಈ ವಾರದ ಪಾಠವನ್ನು ಮೇ 14ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

18:15, 21:27). ಅಬ್ರಾಮ ನಕ್ಕಂತೆಯೇ (ಆದಿ 17:17) ಸಾರಳು (ಆದಿ 18:12) ಮತ್ತು ಇಷ್ಮಾಯೇಲನೂ (ಆದಿ 21:9) ನಗುವರು. ಈ ಅಧ್ಯಾಯಗಳಲ್ಲಿ ಮಾನವರ ಸೂಕ್ಷ್ಮ ಸಂವೇದನೆಗಳು ಹಾಗೂ ಔದಾರ್ಯಗಳು ಮಾರ್ದನಿಸುತ್ತವೆ. ಅಬ್ರಾಮನು ದುಷ್ಟ ಸೊದೋಮಿನವರ ರಕ್ಷಣೆಯಲ್ಲಿ ತೀವ್ರ ಆಸಕ್ತನಾಗಿದ್ದಾನೆ; ಸಾರಳು ಹಾಗರಳು ಮತ್ತು ಲೋಟನ ಬಗ್ಗೆ ಕಾಳಜಿ ಹೊಂದಿದ್ದಾನೆ; ಮತ್ತು ಮೂವರು ದಾರಿಹೋಕ ಅಪರಿಚಿತರಿಗೆ ಸತ್ಕರಿಸುವವನಾಗಿದ್ದಾನೆ (ಆದಿ 18:2–6).

ಇಂತಹ ಸಂದರ್ಭದಲ್ಲಿಯೇ, ಘನವಂತಿಕೆ ಮತ್ತು ಗೌರವಗಳನ್ನು ಸೂಚಿಸುವ ಅಬ್ರಾಮನ ಎಂಬ ಹೆಸರನ್ನು "ಜನಾಂಗಗಳ ಪಿತೃ" (ಆದಿ 17:5) ಎಂಬರ್ಥದ ಅಬ್ರಹಾಮ ಎಂದು ಬದಲಾಯಿಸಲಾಗುತ್ತದೆ. ಹೀಗೆ ದೇವರು ಅಬ್ರಹಾಮನೊಂದಿಗೆ ಮಾಡಿದ ತನ್ನ ಒಡಂಬಡಿಕೆಯ ಮೂಲಕ ದೇವರ ಯೋಜನೆಗಳ ಸಾರ್ವತ್ರಿಕ ಸ್ವರೂಪಗಳ ಕುರುಹುಗಳನ್ನು ನೋಡಬಹುದಾಗಿದೆ.

**ಭಾನುವಾರ** **ಮೇ 8**

## ಅಬ್ರಹಾಮನ ವಿಶ್ವಾಸವು

ಆದಿಕಾಂಡ 15:1–21 ಮತ್ತು ರೋಮ 4:3,4,9,22ನ್ನು ಓದಿರಿ. ಅಬ್ರಾಮನು ನಂಬಿಕೆಯಿಂದಲೇ ಜೀವಿಸುವುದರ ಅರ್ಥವನ್ನು ಹೇಗೆ ತೋರಿಸಿರುವರು?

ತನ್ನ ಬಾಧ್ಯಸ್ಥನ ಕುರಿತು ಅಬ್ರಾಮನಿಗಿದ್ದ ಚಿಂತೆಗೆ ದೇವರು ಮೊದಲ ಪ್ರತಿಕ್ರಿಯೆಯಲ್ಲಿ "ಅವನ ಸ್ವಂತ ಹೊಟ್ಟೆಯಲ್ಲಿ" ಮಗನು ಹುಟ್ಟುವನೆಂದು ಹೇಳಿದನು (ಆದಿ 15:4). ಇದೇ ಪದಗಳನ್ನು ಬಳಸಿ ಪ್ರವಾದಿ ನಾತಾನನು ಮುಂದೆ ಬರಲಿದ್ದ ಮೆಸ್ಸೀಯ ರಾಜನ ಸಂತತಿಯ ಬಗ್ಗೆ ಪ್ರಸ್ತಾಪಿಸಿದ್ದನು (2 ಸಮುವೇಲ 7:12). ಅಬ್ರಾಮನು ಮರು ಆಶ್ವಾಸನೆ ಹೊಂದಿದನು ಮತ್ತು ಕರ್ತನನ್ನು ನಂಬಿದನು" (ಆದಿ 15:6). ಏಕೆಂದರೆ ದೇವರ ವಾಗ್ದಾನವು ನೆರವೇರುವುದು ತನ್ನ ನೀತಿವಂತಿಕೆಯ ಆಧಾರದ ಮೇಲೆ ಅಲ್ಲ. ಬದಲಿಗೆ ದೇವರದರಲ್ಲಿ ಎಂಬುದಾಗಿ ಅರ್ಥಮಾಡಿಕೊಂಡಿದ್ದನು (ಆದಿ 15:6 ಮತ್ತು ರೋಮ 4:5,6).

ಅಂದು ಅಲ್ಲಿದ್ದ ಸಂಪ್ರದಾಯಗಳಲ್ಲಿ, ಈ ರೀತಿಯ ಎಣಿಕೆಯು ಬಹಳ ವಿಶಿಷ್ಟವಾದದ್ದು. ಪುರಾತನ ಐಗುಪ್ತದ ಮತದಲ್ಲಿ, ಉದಾಹರಣೆಗೆ, ಮಾತ್ ದೇವತೆಯ ನೀತಿಯ ಬದಲಿಗೆ, ಒಬ್ಬನ ಮಾನವ ಕರ್ಮದ ನೀತಿವಂತಿಕೆಯ ಆಧಾರದಲ್ಲಿ

ನ್ಯಾಯತೀರ್ಪು ಉಂಟಾಗುತ್ತಿತ್ತು. ಸರಳವಾಗಿ, ನೀವು ನಿಮ್ಮ "ರಕ್ಷಣೆ"ಯನ್ನು ಸಂಪಾದಿಸಿಕೊಳ್ಳಬೇಕು ಎಂದು ಹೇಳಿಕೊಡುತ್ತಿತ್ತು.

ನಂತರ ಅಬ್ರಾಮನಿಗೆ ದೇವರು ಒಂದು ಬಲಿವಿಧಿಯನ್ನು ನೆರವೇರಿಸಲು ಏರ್ಪಡಿಸಿದನು. ಮೂಲತಃ, ಈ ಬಲಿಯು ನಮ್ಮ ಪಾಪಗಳಿಗೆ ಕ್ರಿಸ್ತನು ಸತ್ತದ್ದನ್ನು ಸೂಚಿಸುತ್ತದೆ. ಈ ಯಜ್ಞಬಲಿಗಳಿಂದ ಸಂಕೇತವಾಗಿದ್ದ ದೇವರ ನೀತಿವಂತಿಕೆಯ ದಾನವಾದ ಕೃಪೆಯಿಂದಲೇ ಮಾನವರು ರಕ್ಷಣೆ ಹೊಂದುವರು. ಆದರೆ ಈ ನಿರ್ದಿಷ್ಟ ಯಜ್ಞಬಲಿಯು ಅಬ್ರಾಮನಿಗೆ ಉದ್ದೇಶಿತ ಸಂದೇಶಗಳನ್ನು ತೋರಿಸಿಕೊಟ್ಟಿತು. ಆ ರಣಹದ್ದುಗಳು ಯಜ್ಞದ ಮಾಂಸವನ್ನು ತಿನ್ನಬರುವುದು– ಅಬ್ರಾಮನ ಸಂತತಿಯವರು ನಾನೂರು ವರುಷಗಳು (ಆದಿ 15:13) ಅಥವಾ ನಾಲ್ಕು ತಲೆಮಾರುಗಳು (ಆದಿ 15:16) ಗುಲಾಮರಾಗಿ ಸಂಕಟಪಡಬೇಕಾದದ್ದನ್ನು ತೋರುವುದು (ಆದಿ 15:9–11). ಆನಂತರ ನಾಲ್ಕನೇ ತಲೆಮಾರಿನಲ್ಲಿ, ಅಬ್ರಾಮನ "ಸಂತತಿಯವರು ಇಲ್ಲಿಗೆ ಹಿಂತಿರುಗುವರು" (ಆದಿ 15:16).

ಆ ಯಜ್ಞಬಲಿ ಸಮರ್ಪಣೆಯ ಅಂತಿಮಘಟ್ಟವು ಬಹಳ ಕೌತುಕವಾಗಿದೆ: "ಉರಿಯುವ ದೀವಟಿಕೆಯು ಆ ಮಾಂಸದ ತುಂಡುಗಳ ನಡುವೆ ಹೋದವು" (ಆದಿ 15:17). ಈ ವೈಶಿಷ್ಟ್ಯಪೂರ್ಣ ಅದ್ಭುತವು ಅಬ್ರಾಮನ ಸಂತತಿಗೆ ವಾಗ್ದಾನದ ದೇಶವನ್ನು ಕೊಡುವನೆಂಬ ತನ್ನ ಒಡಂಬಡಿಕೆಯ ಪೂರೈಕೆಗೆ ದೇವರು ಬದ್ಧನಾಗಿರುವುದನ್ನು ಸೂಚಿಸುತ್ತದೆ (ಆದಿ 15:18).

ವಾಗ್ದಾನದ ದೇಶದ ಎಲ್ಲೆಗಳು– "ಐಗುಪ್ತದ ನದಿಯಿಂದ ಮಹಾನದಿಯಾದ ಯುಫ್ರೇಟೀಸ್ ನದಿಯವರೆಗೆ" (ಆದಿ 15:18)– ಏದೇನಿನ ಎಲ್ಲೆಗಳನ್ನು (ಆದಿ 2:13,14 ಹೋಲಿಸಿ) ನಮಗೆ ಜ್ಞಾಪಕ ಮಾಡುವುದು. ಈ ಪ್ರವಾದನೆಯಲ್ಲಿ, ಕೇವಲ ಐಗುಪ್ತದಿಂದ ಬಿಡುಗಡೆಯಾಗಿ ಇಸ್ರಾಯೇಲಿಗೆ ಸಿಗುವ ಸ್ವದೇಶಕ್ಕಿಂತಲೂ ಮಿಗಿಲಾದ ವಿಷಯದ ಅಡಕವಾಗಿದೆ. ಅಬ್ರಹಾಮನ ಸಂತತಿಯವರು ಕಾನಾನಿನ ದೇಶವನ್ನು ಸ್ವದೇಶವಾಗಿ ತೆಗೆದುಕೊಳ್ಳುವುದು, ಈ ಪ್ರವಾದನೆಯ ದೇವರ ಜನರು ರಕ್ಷಣೆ ಹೊಂದಿ, ಏದೇನ್ ತೋಟಕ್ಕೆ ಹಿಂತಿರುಗುವ ಅಭಿಪಾಯವನ್ನು ಸೂಚಿಸುತ್ತದೆ.

ನಮ್ಮ ರಕ್ಷಣೆಯ ನಿರೀಕ್ಷೆಗೆ ಯೇಸುವಿನ ಮತ್ತು ಆತನ ನೀತಿವಂತಿಕೆಯ ಮೇಲೆ ಮಾತ್ರ ನೆಲೆಗೊಂಡಿರಬೇಕೆಂದು ನಾವು ಹೇಗೆ ಕಲಿಯಬಹುದು? ನಮ್ಮ

ಒಳ್ಳೆಯ ಕಾರ್ಯಗಳನ್ನು ನಾವು ಎಣಿಸಲು ಪ್ರಾರಂಭಿಸಿದರೆ ಏನಾಗುವುದು?

**ಸೋಮವಾರ** **ಮೇ 9**

## ಅಬ್ರಹಾಮನ ಸಂಶಯಗಳು

ಆದಿಕಾಂಡ 16:1–16ನ್ನು ಓದಿರಿ. ದೇವರು ಕೊಟ್ಟ ವಾಗ್ದಾನಗಳ ವಿರುದ್ಧವಾಗಿ, ಅಬ್ರಾಮನು ಹಾಗರಗಳನ್ನು ತೆಗೆದುಕೊಂಡದ್ದು ಯಾವ ಮಹತ್ವದ ವಿಚಾರವನ್ನು ಹೊಂದಿದೆ? ಈ ಇಬ್ಬರು ಹೆಂಗಸರು ಹೇಗೆ ವಿಶ್ವಾಸದ ಎರಡು ಭಾವಗಳನ್ನು ತೋರುತ್ತಾರೆ (ಗಲಾತ್ಯ 4:21–31)?

ಅಬ್ರಾಮನು ಸಂದೇಹಪಟ್ಟಾಗ (ಆದಿ 15:2), ಅವನು ಮಗನನ್ನು ಹೆರುವನೆಂದು ದೇವರು ಅಸ್ಪಷ್ಟತೆಯಿಲ್ಲದ ಹಾಗೆ ಆಶ್ವಾಸನೆಕೊಟ್ಟನು. ವರುಷಗಳ ನಂತರ, ಅಬ್ರಾಮನು ಮಕ್ಕಳಿಲ್ಲದೇ ಇದ್ದನು. ದೇವರು ಹಿಂದೆಕೊಟ್ಟ ಅತಿ ಬಲಾಢ್ಯ ಪ್ರವಾದನಾ ವಾಗ್ದಾನದ ನಂತರವೂ, ಅಬ್ರಾಮನು ವಿಶ್ವಾಸವನ್ನು ಕಳೆದುಕೊಂಡಿರುವುದು ವ್ಯಕ್ತಗೊಳ್ವದು: ಸಾರಾಯಳ ಮೂಲಕ ತನಗೆ ಮಕ್ಕಳಾಗುವುದನ್ನು ಅಬ್ರಾಮನು ನಂಬುತ್ತಿಲ್ಲ. ಸಾರಾಯಳು, ಕೂಡ ಅಸಹಾಯಕ ಭಾವದಲ್ಲಿ, ಅಂದಿನ ರೂಢಿಯ ಪ್ರಕಾರ ತನ್ನ ಬದಲಾಗಿ ಇನ್ನೊಬ್ಬರನ್ನು ತೆಗೆದುಕೊಳ್ಳಲು ಒತ್ತಾಯ ಮಾಡಿದಳು. ಸಾರಾಯಳ ಸೇವಕಿಯಾದ ಹಾಗರಳನ್ನು ಈ ಕಾರ್ಯಕ್ಕೆ ನೇಮಿಸಲಾಗುತ್ತದೆ. ಈ ವಿಧಾನವು ಕಾರ್ಯ ಮಾಡಿತು. ಈ ಮಾನವ ತಂತ್ರವು ದೇವರ ವಾಗ್ದಾನಗಳ ಮೇಲೆ ವಿಶ್ವಾಸವಿಡುವುದಕ್ಕಿಂತಲೂ ಹೆಚ್ಚು ಸಮರ್ಥವೆಂದು ಭಾಸವಾಗುವುದು ಒಂದು ವಿಡಂಬನೆಯೇ.

ಅಬ್ರಾಮನನೊಂದಿಗಿನ ಸಾರಾಯಳ ಈ ಸಂಬಂಧವು ಏದೇನ್ ತೋಟದಲ್ಲಿ ಆದಾಮ ಮತ್ತು ಹವ್ವಳ ವೃತ್ತಾಂತವನ್ನು ಜ್ಞಾಪಕ ಮಾಡುತ್ತದೆ. ಈ ಎರಡೂ ಉಲ್ಲೇಖಗಳಲ್ಲಿ ಭಾವಗಳು ಕಂಡುಬರುತ್ತವೆ (ಹವ್ವಳಂತೆ, ಸಾರಾಯಳು ಸಕ್ರಿಯಳು; ಅಬ್ರಾಮನು ಆದಾಮನಂತೆ ನಿಷ್ಕ್ರಿಯ) ಮತ್ತು ಸಮಾನ ಕ್ರಿಯಾಪದಗಳನ್ನು ಮತ್ತು ಪದರೂಪಗಳನ್ನು ಹೊಂದಿವೆ ("ಕಿವಿಕೊಟ್ಟನು", "ಕೊಟ್ಟಳು" "ತೆಗೆದುಕೊಂಡನು"). ಅಂತೆಯೇ ಎರಡು ಕಥೆಗಳ ಸದೃಶ ಅಂಶಗಳು ದೇವರು ಈ ಕಾರ್ಯವಿಧಾನವನ್ನು ತಿರಸ್ಕರಿಸಿದ್ದನ್ನು ಕೂಡ ವ್ಯಕ್ತಮಾಡುತ್ತವೆ.

ಅಪೊಸ್ತಲ ಪೌಲನು ಇದನ್ನು ದೃಷ್ಟಾಂತವಾಗಿ, ಕ್ರಿಯೆಗಳು ಮತ್ತು ಕೃಪೆಯ (ಆಧಾರದಲ್ಲಿ ರಕ್ಷಣೆಯ) ಬಗ್ಗೆ ಮಾತಾಡಿದ್ದಾನೆ (ಗಲಾತ್ಯ 4:23–26). ಈ ಎರಡೂ ಉಲ್ಲೇಖನಗಳಲ್ಲಿ ಬಂದ ಫಲಿತಾಂಶವು ಒಂದೇ : ದೇವರ ಚಿತ್ತದ ಆಚೆ ಮಾಡುವ ಮಾನವ ಕಾರ್ಯದ ಫಲವು ತಕ್ಷಣದಲ್ಲಿ ಕಂಡುಬಂದರೂ ಮುಂದೆ ಸಮಸ್ಯೆಗಳಿಗೆ ದಾರಿ ಮಾಡುತ್ತವೆ. ಈ ಪೂರ್ಣಪ್ರಕ್ರಿಯೆಯಲ್ಲೆಲ್ಲಾ ದೇವರು ಉಪಸ್ಥಿತನಿರಲಿಲ್ಲ ಎಂಬುದನ್ನು ಗಮನಿಸಿ. ಸಾರಾಯಳು ದೇವರ ಬಗ್ಗೆ ಮಾತಾಡುತ್ತಾಳೆ ವಿನಹ ದೇವರಿಗೆ ಮಾತಾಡುವುದಿಲ್ಲ; ಅಥವಾ ದೇವರೂ ಕೂಡ ಅವರಿಬ್ಬರಲ್ಲಿ ಯಾರಿಗೂ ಮಾತಾಡನು. ಹಿಂದಿನ ಅಧ್ಯಾಯದಲ್ಲಿ ಬಹಳ ದಟ್ಟವಾಗಿ ಕಂಡುಬಂದಿರುವ ದೇವರ ಪ್ರಸನ್ನತೆಯ ನಂತರ, ಇಲ್ಲಿ ದೇವರು ಇಲ್ಲದಿರುವುದು ಬಹಳ ಗುರುತರವಾಗಿ ತೋರಿಬರುತ್ತಿದೆ.

ಅಬ್ರಾಮನ ಮನೆಯನ್ನು ತೊರೆದು ಹೋದ ಮೇಲೆ ಮಾತ್ರ ದೇವರು ಹಾಗರಳಿಗೆ ಕಾಣಿಸಿಕೊಂಡನು. ಈ ಅನಿರೀಕ್ಷಿತವಾದ ದೇವರ ಪ್ರತ್ಯಕ್ಷತೆಯು, ನಾವು ದೇವರನ್ನು ಬಿಟ್ಟು ಕೆಲಸ ಮಾಡಿದಾಗಲೂ ದೇವರು ನಮಗೆ ಪುನಃ ಕಾಣಿಸಿಕೊಳ್ಳುವುದನ್ನು ತೋರುವುದು. "ಕರ್ತನ ದೂತನು" (ಆದಿ 16:7) ಎಂಬ ಪದವಿಯು ಹೆಚ್ಚಾಗಿ ಕರ್ತನು" ಯೆಹೋವನು (ಆದಿಕಾಂಡ 18:1,13,22) ಎಂಬುದಾಗಿ ಗುರುತಿಸುವುದು. ಈಗ ದೇವರು ಮೊದಲು ಹೆಜ್ಜೆ ಇಟ್ಟು ಹಾಗರಳು ಓರ್ವ ಮಗನನ್ನು ಹಡೆಯುವಳು ಎಂದು ಹೇಳಿ. 'ದೇವರು ಕೇಳುವನು' ಎಂಬರ್ಥದ (ಆದಿ 16:11) ಇಷ್ಮಾಯೇಲನು ಹೆಸರಿಡಲು ಸೂಚಿಸಿದನು. ಅಣುಕವೆಂಬಂತೆ, ಕಥೆಯಲ್ಲಿ, ಅಬ್ರಾಮನು ಸಾರಾಯಳ ಮಾತನ್ನು "ಕೇಳಿದನು" (ಶಾಮ) ಎಂಬುದಕ್ಕೆ ಅಂತ್ಯದಲ್ಲಿಯೂ ಕೇಳುವ (ಶಾಮ) ವಿಷಯವು ಪ್ರಸ್ತಾಪವಾಗಿದೆ.

ಇಲ್ಲಿ ಅಬ್ರಾಮನು ವಿಶ್ವಾಸವಿಲ್ಲದವನಾದಂತೆ, ನಮಗೂ ಆಗುವುದು ಸುಲಭವೇಕೆ?

**ಮಂಗಳವಾರ** **ಮೇ 10**

## ಅಬ್ರಹಾಮನ ಒಡಂಬಡಿಕೆಯ ಗುರುತು

ಆದಿಕಾಂಡ 17:1–19 ಮತ್ತು ರೋಮಾಪುರ 4:11ನ್ನು ಓದಿರಿ. ಈ ಸುನ್ನತಿ ವಿಧಿಯ ಆತ್ಮೀಕ ಹಾಗು ಪ್ರವಾದನಾ ಮಹತ್ವಗಳೇನು?

ಅಬ್ರಾಮನ ನಂಬಿಕೆ ಕೊರತೆಯು, ಹಿಂದಿನ ಅಧ್ಯಾಯ (ಆದಿ 16)ದಲ್ಲಿ ನೋಡಿದ ಹಾಗೆ ದೇವರೊಂದಿಗಿನ ಆತನ ಆತ್ಮೀಕ ಜೀವನದ ಪಯಣವನ್ನು ಮುರಿದುಹಾಕಿತು. ಆ ಕಾಲದಲ್ಲಿ ದೇವರು ಮೌನವಾಗಿದ್ದನು. ಆದರೆ ಈಗ ದೇವರು ಪುನಃ ಅಬ್ರಾಮನೊಂದಿಗೆ ಮಾತಾಡಿದನು. ಅಬ್ರಾಮನೊಂದಿಗೆ ದೇವರು ಪುನಃ ಕೂಡಿಕೊಂಡು, ಅವನೊಂದಿಗೆ ತಾನು ಮಾಡಿದ ಒಡಂಬಡಿಕೆಯ ಅದೇ ಹಿಂದಿನ ಹಂತಕ್ಕೆ ಅಬ್ರಾಮನನ್ನು ಕರೆತಂದೆನು (ಆದಿ 15:18).

ಆದರೂ ಈಗ ದೇವರು ಅವನಿಗೆ ಒಡಂಬಡಿಕೆಯ ಗುರುತನ್ನು ಕೊಟ್ಟನು. ಸುನ್ನತಿಯ ಬಗ್ಗೆ ಅನೇಕ ಕಾಲದ ಚರ್ಚೆಯು ವಿದ್ವಾಂಸರಲ್ಲಿದ್ದರೂ, ಸುನ್ನತಿಯಲ್ಲಿ ರಕ್ತವು ಸುರಿಸಲ್ಪಡುವುದರಿಂದ (ವಿಮೋ 4:25 ನೋಡಿರಿ), ಯಜ್ಞಬಲಿಯ ಚೌಕಟ್ಟಿನಲ್ಲಿ ಇದನ್ನು ಅರ್ಥಮಾಡಿಕೊಂಡರೆ, ನೀತಿವಂತಿಕೆಯ ಅವನ ಮೇಲೆ ಹೊರಿಸಲಾಯಿತು ಎಂಬುದನ್ನು ಸೂಚಿಸುವುದು (ರೋಮ 4:11ನ್ನು ಹೋಲಿಸಿ).

ಸುನ್ನತಿಯ ಗುರುತುಹೊಂದಿದ ಈ ಒಡಂಬಡಿಕೆಯು ಮೊದಲನೆಯ ಮೆಸ್ಸಿಯನ ಪ್ರವಾದನೆಗೆ ಬೆರಳು ಮಾಡಿ ತೋರಿಸಿ ವಿವರಿಸುವುದರಿಂದ ಮಹತ್ವದ್ದಾಗಿದೆ (ಆದಿಕಾಂಡ 17:7ನ್ನು ಆದಿ 3:15 ಜೊತೆ ಹೋಲಿಸಿ). ಈ ಎರಡು ವಚನಗಳ ಸಮಾನ ಅಂಶಗಳಲ್ಲಿ ಒಂದು ಜನಾಂಗವು ಹುಟ್ಟುವುದಕ್ಕಿಂತ ಹೆಚ್ಚಿನ ವಿಷಯಗಳನ್ನು ದೇವರು ಅಬ್ರಾಮನಿಗೆ ಮಾಡಿದ ವಾಗ್ದಾನವು ಒಳಗೊಂಡಿದೆ; ಇದರಲ್ಲಿ ಭೂಮಿಯ ಎಲ್ಲಾ ಜನರೂ ಪಡೆಯುವ ರಕ್ಷಣೆಯ ಆತ್ಮೀಕ ವಾಗ್ದಾನವನ್ನು ಹೊಂದಿದೆ. "ನಿತ್ಯವಾದ ಒಡಂಬಡಿಕೆ"ಯ ವಾಗ್ದಾನವು (ಆದಿ 17:7) ಮೆಸ್ಸೀಯನ ಸಂತತಿ (ಬೀಜ)ಯ ಕಾರ್ಯದ ಸೂಚನೆಯಾಗಿದ್ದು, ಕ್ರಿಸ್ತನ ಬಲಿದಾನವು ನಂಬಿಕೆಯಿಂದ ಕೇಳಿಕೊಳ್ಳುವುದರಿಂದ ಅವರಿಗೆ ನಿತ್ಯಜೀವವನ್ನೂ ಮತ್ತು ನಂಬಿಕೆಯ ಎಲ್ಲಾ ಫಲಗಳನ್ನು ಕೊಡುವ ಭರವಸೆಯಾಗಿದೆ (ರೋಮ 6:23ಯನ್ನು ತೀತನು 1:2ರೊಂದಿಗೆ ಹೋಲಿಸಿ).

ಅಬ್ರಾಮ ಮತ್ತು ಸಾರಾಯಳ ಹೆಸರುಗಳನ್ನು ಬದಲಿಸುವುದರಲ್ಲಿ ನಿತ್ಯಭವಿಷ್ಯದ ವಾಗ್ದಾನವು ಒಳಪಟ್ಟಿರುವುದು ಸ್ವಾರಸ್ಯಕರ ವಿಷಯವೇ. ಅವರ ಹೆಸರುಗಳು ಅಂದಿನ ಅವರ ಸ್ಥಿತಿಗಳನ್ನು ತಿಳಿಸುತ್ತಿತ್ತು; ಅಬ್ರಾಮ ಅಂದರೆ "ಉನ್ನತ ತಂದೆ" ಮತ್ತು ಸಾರಾಯಳು ಅಂದರೆ "ನನ್ನ ರಾಣಿ" (ಅಬ್ರಾಮನ ರಾಣಿ). ಅವರ

ಹೆಸರುಗಳನ್ನು "ಅಬ್ರಹಾಮ" ಮತ್ತು ಸಾರಳು ಎಂಬವು ಭವಿಷ್ಯವನ್ನು ಸೂಚಿಸುತ್ತವೆ: ಅಬ್ರಹಾಮ ಎಂದರೆ "ಜನಾಂಗಗಳ ಪಿತೃ" ಮತ್ತು ಸಾರಳು ಎಂದರೆ "ರಾಣಿ" (ಎಲ್ಲರಿಗೂ). ಅದರಂತೆಯೇ, ಸ್ವಲ್ಪ ವಿಪರ್ಯಾಸವೆಂಬಂತೆ, ಇಸಾಕನ ಹೆಸರು ("ಅವನು ನಗುವನು") (ಬೈಬಲಿನಲ್ಲಿ ಬರೆಯಲಾದ ಮೊದಲ ನಗುವಿನ ದಾಖಲೆಯಾಗಿದ್ದು) ಅಬ್ರಹಾಮನ ನಗುವನ್ನು ನೆನಪಿಸುವುದು (ಆದಿ 17:17); ಆ ನಗುವು ಅಪನಂಬಿಕೆಯದ್ದೋ ಅಥವಾ ಆಶ್ಚರ್ಯ ಸೂಚಕವೋ. ಹೇಗಾದರೂ, ದೇವರು ಅವನಿಗೆ ಮಾಡಿದ ಸ್ಪಷ್ಟ ವಾಗ್ದಾನವನ್ನು ನಂಬಿದರೂ, ಅಬ್ರಹಾಮನು ವಿಶ್ವಾಸ ಮತ್ತು ಭರವಸೆಯಿಂದ ಅದನ್ನು ನಿಜಜೀವನದಲ್ಲಿ ತೋರಿಸಲು ವಿಫಲನಾದನು.

ಅಬ್ರಹಾಮನಂತೆ, ನಂಬಿಕೆಯ ವಿಷಯದಲ್ಲಿ ಕೆಲವೊಮ್ಮೆ ಹೋರಾಟವಿದ್ದರೂ ನಂಬಿಕೆಯಲ್ಲಿಯೇ ಮುಂದುವರಿಯಲು ಹೇಗೆ ಕಲಿಯಬಹುದು? ಸಂಶಯದ ಕಾಲದಲ್ಲಿಯೂ, ನಾವು ಬಿಟ್ಟುಕೊಡಬಾರದು ಎಂಬುದು ಪ್ರಮುಖವಾದುದೇಕೆ?

**ಬುಧವಾರ** **ಮೇ 11**

## ವಾಗ್ದಾನದ ಪುತ್ರನು

ಸುನ್ನತಿಯು ಕೊನೆಯ ದೃಶ್ಯವು ಎಲ್ಲರನ್ನು ಒಳಗೊಂಡಿದೆ. ಕೇವಲ ಇಷ್ಮಾಯೇಲನು ಮಾತ್ರವಲ್ಲ, ಅಬ್ರಹಾಮನ ಮನೆಯಲ್ಲಿದ್ದ ಗಂಡಸರೆಲ್ಲರೂ ಸುನ್ನತಿ ಮಾಡಿಸಿಕೊಂಡರು (ಆದಿ 17:23–27). ಕೊಲ್ ಅಂದರೆ "ಎಲ್ಲರು", "ಪ್ರತಿಯೊಂದು" ಎಂಬೀ ಪದವು ನಾಲ್ಕು ಬಾರಿ ಬರೆಯಲ್ಪಟ್ಟಿದೆ (ಆದಿ 17:23,27). ಇಂತಹ ವ್ಯಾಪಕ ಹಿನ್ನೆಲೆಯಲ್ಲಿ ದೇವರು ಅಬ್ರಹಾಮನಿಗೆ ಕಾಣಿಸಿಕೊಂಡು "ಇಸಾಕ"ನೆಂಬ ಮಗನ ವಾಗ್ದಾನವನ್ನು ದೃಢಪಡಿಸಿದನು.

ಆದಿಕಾಂಡ 18:1–15 ಮತ್ತು ರೋಮಪುರ 9:9ನ್ನು ಓದಿರಿ. ಅಬ್ರಹಾಮನು ಅತಿಥಿಗಳನ್ನು ಸ್ವೀಕರಿಸಿದ ವಿಚಾರದಿಂದ ನಾವು ಅತಿಥಿಸತ್ಕಾರದ ಯಾವ ಪಾಠಗಳನ್ನು ಕಲಿಯಬಹುದು? ಅಬ್ರಹಾಮನ ಆತಿಥ್ಯಕ್ಕೆ ದೇವರು ಹೇಗೆ ಪ್ರತಿಕ್ರಿಯಿಸಿದನು?

ಅಪರಿಚಿತರು ಯಾರೆಂದು ಅಬ್ರಹಾಮನಿಗೆ ತಿಳಿದಿತ್ತೋ ಎಂಬುದು ಸ್ಪಷ್ಟವಿಲ್ಲ (ಇಬ್ರಿ 13:2) ಆದರೂ, ಅವರಲ್ಲಿ ದೇವರೇ ಇರುವನೆಂಬ ರೀತಿಯಲ್ಲಿ ಆತನು

ನಡಕೊಂಡನು. ಆತನು "ತನ್ನ ಗುಡಾರದ ಬಾಗಿನಲ್ಲಿ ನಡುಬಿಸಿಲಲ್ಲಿ ಕುಳಿತಿದ್ದನು" (ಆದಿ 18:1) ಮತ್ತು ಮರಳುಗಾಡಿನಲ್ಲಿ ಭೇಟಿಗೆ ಬರುವುದು ಅಪರೂಪ; ಹಾಗಾಗಿ ಅವರನ್ನು ಸಂಧಿಸಲು ಬಯಸಿದನು. ಅಬ್ರಹಾಮನು ಮುದುಕನಾಗಿದ್ದರೂ ಅವರ ಬಳಿಗೆ ಓಡಿಹೋದನು (ಆದಿ 18:12). ಅವರಲ್ಲೊಬ್ಬನನ್ನು ಅಹೋನೈ "ನನ್ನ ಒಡೆಯ" (ಆದಿ 18:3) ಎಂದು ದೇವರಿಗೆ, ಹೆಚ್ಚಾಗಿ ಬಳಸುವ ನಾಮವನ್ನು ಬಳಸಿದನು (ಆದಿ 20:4, ವಿಮೋ 5:17). ಅವರಿಗಾಗಿ ಆತುರದಲ್ಲಿ ಊಟವನ್ನು ಸಿದ್ಧಮಾಡಿದನು (ಆದಿ 16:6,7). ಅವರ ಬಳಿ ನಿಂತು, ಅವರ ಅಗತ್ಯಕ್ಕೆ ಸ್ಪಂದಿಸಿ, ಅವರನ್ನು ಉಪಚರಿಸಿದನು (ಆದಿ 18:8).

ಅಬ್ರಹಾಮನು ಈ ಪರಲೋಕದ ಅಪರಿಚಿತರನ್ನು ನೋಡಿದ ರೀತಿಯು ಅತಿಥಿ ಸತ್ಕಾರದ ಉನ್ನತ ಪ್ರಭಾವದ ಮಾದರಿಯಾಯಿತು (ಇಬ್ರಿಯ 13:2). ಆತನು ಅವರಿಗೆ ತೋರಿದ ಗೌರವಭಾವವು ಸತ್ಕರಿಸುವ ಬೋಧನೆಯನ್ನು ಹೊಂದಿದೆ. ಅಪರಿಚಿತರಿಗೆ ತೋರುವ ಗೌರವ ಹಾಗು ಸತ್ಕಾರಗಳು ಕೇವಲ ಔಚಿತ್ಯದ ಒಳ್ಳೆಯ ಭಾವ ಮಾತ್ರವಲ್ಲ. ಇದು ಒಂದು ಧಾರ್ಮಿಕ ಕರ್ತವ್ಯವು, ಮತ್ತು ದೇವರಿಗೆ ನಾವು ಇದನ್ನು ಮಾಡುತ್ತಿರುವೆವು (ಮತ್ತಾಯ 25:35–40) ಎಂಬುದಾಗಿ ಬೈಬಲ್ ಇದಕ್ಕೆ ಒತ್ತುಕೊಡುತ್ತದೆ. ಅಣಕವೆಂಬಂತೆ, ಉದಾರವಾಗಿದ್ದು, ಅತಿಥಿಗಳನ್ನು ಸ್ವೀಕರಿಸುವವರೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಬದಲು ದೇವರು ಹಸಿದ, ಬಡ ಪರದೇಶಿಯೊಂದಿಗೆ ಹೆಚ್ಚಾಗಿ ಗುರುತಿಸಿಕೊಳ್ಳುತ್ತಿರುವನು.

ಮತ್ತೊಂದು ಮಗ್ಗುಲಲ್ಲಿ ನೋಡುವಾಗ, ಮಾನವ ಸ್ತರದಲ್ಲಿ ದೇವರು ಪ್ರವೇಶಿಸುವುದು, ಮಾನವರೆಡೆಗೆ ದೇವರ ಕೃಪೆ ಮತ್ತು ಪ್ರೀತಿಯ ಸಂಕೇತವಾಗಿದೆ. ಇಲ್ಲಿ ದೇವರು (ಅಬ್ರಹಾಮನಿಗೆ) ಕಾಣಿಸಿಕೊಂಡದ್ದು, ಮಾನವರನ್ನು ಸೇರಲು, ಓರ್ವ ಮಾನವ ಸೇವಕನಾಗಿ, ತನ್ನ ಪರಲೋಕ ನಿವಾಸವನ್ನು ಬಿಟ್ಟು ಕ್ರಿಸ್ತನು ಬರಲಿರುವುದನ್ನು ತೋರುತ್ತಿತ್ತು (ಫಿಲಿಪ್ಪಿ 2:7,8). ದೇವರು ಇಲ್ಲಿ ಕಾಣಿಸಿಕೊಂಡಿದ್ದು. ಆತನ ವಾಗ್ದಾನದ ಖಚಿತತೆಗೆ ಸಾಕ್ಷಿಕೊಡುತ್ತವೆ (ಆದಿ 18:10). ದೇವರು ಸಾರಳು ಹಿಂದೆ ಅಡಗಿಕೊಂಡಿದ್ದನ್ನು ನೋಡಿದನು (ಆದಿ 18:10) ಮತ್ತು ಆಕೆಯ ಒಳ ಆಲೋಚನೆಯನ್ನು ಕೂಡ ತಿಳಿದಿರುವನು (ಆದಿ 18:12). ಆಕೆಯು ನಕ್ಕದ್ದನ್ನು ತಿಳಿದಿದ್ದನು ಮತ್ತು ಆಕೆಯ ಅವಿಶ್ವಾಸದ ತಟದಲ್ಲಿ ದೇವರು ತನ್ನ ನುಡಿಯನ್ನು

ಪೂರೈಸುವುದಕ್ಕೆ ಅವಕಾಶವಾಯಿತು. "ದೇವರು ಬಹಳ ಉದಾರಿಗಳಾಗಿದ್ದು, ಸತ್ಕಾರ ಮಾಡುವವರೊಂದಿಗೆ ಗುರುತಿಸಿಕೊಳ್ಳುವ ಬದಲು ದೇವರು ಹಸಿದ ಕೊರತೆಯುಳ್ಳ ಪರದೇಶಿಗಳೊಂದಿಗೆ ಹೆಚ್ಚಾಗಿ ಗುರುತಿಸಿಕೊಂಡಿರುವನು" ಎಂಬುದರ ಕುರಿತು ದೀರ್ಘವಾಗಿ ಆಲೋಚಿಸಿರಿ. ಈ ಸೂತ್ರವನ್ನು ನಾವು ನೆನಪಿನಲ್ಲಿಡುವುದು ಎಷ್ಟು ಪ್ರಾಮುಖ್ಯವಾಗಿದೆ?

**ಗುರುವಾರ** **ಮೇ 12**

## ಸೊದೋಮಿನಲ್ಲಿ ಲೋಟನು

ಆದಿಕಾಂಡ 18:16–19:29ನ್ನು ಓದಿರಿ. ಅಬ್ರಹಾಮನ ಪ್ರವಾದನಾತ್ಮಕ ಸೇವೆಯು ಲೋಟನ ಜವಾಬ್ದಾರಿಯ ವಿಷಯದಲ್ಲಿ ಹೇಗೆ ವ್ಯಕ್ತವಾಯಿತು?

ಅಬ್ರಹಾಮನಿಗೆ ಮಗನು ಹುಟ್ಟುವ ದೇವರ ವಾಗ್ದಾನವು ಆಗ ತಾನೇ ಪುನರ್ ದೃಢೀಕರಿಸಲ್ಪಟ್ಟಿತ್ತು. ಆ ಸುಸಮಾಚಾರದ ಆನಂದದಲ್ಲಿ ನಲಿದಾಡುವ ಬದಲಿಗೆ, ಸೊದೋಮಿನಲ್ಲಿದ್ದ ಲೋಟನ ಅಂತ್ಯಸ್ಥಿತಿಯ ಬಗ್ಗೆ ದೇವರೊಂದಿಗೆ ಅತ್ಯಾಸಕ್ತಿಯಿಂದ ವಾದಿಸುತ್ತಿದ್ದಾನೆ. ದೇವರು ತನ್ನ ಚಿತ್ತವನ್ನು ತಿಳಿಯಮಾಡುವ ಪ್ರವಾದಿ ಮಾತ್ರವೇ ಆಗಿರದೇ, ಅಬ್ರಹಾಮನು ದುಷ್ಟರ ವಿಷಯದಲ್ಲಿ ಬೇಡಿಕೊಳ್ಳುವ ಪ್ರವಾದಿಯೂ ಆಗಿದ್ದಾನೆ. "ದೇವರ ಎದುರಾಗಿ ನಿಂತನು" (ಆದಿ 18:27) ಎಂಬ ಇಬ್ರಿಯ ಪದಪುಂಜವು ಪ್ರಾರ್ಥನೆ (ಬೇಡಿಕೊಳ್ಳು) ಎಂಬುದಕ್ಕೆ ಬಳಸುವ ನುಡಿಗಳು.

ನಿಜವಾಗಿಯೂ ಅಬ್ರಹಾಮನು ದೇವರೊಂದಿಗೆ ವಾದಿಸಿ ತನ್ನ ಸೋದರನ ಮಗನು ವಾಸಿಸಿದ ಸೊದೋಮನ್ನು ಉಳಿಸಬೇಕೆಂದು ಬೇಡಿದನು. 50 ರಿಂದ 10ರ ತನಕ ಬಂದು, ಒಂದೊಮ್ಮೆ 10ಜನ ಸೋದೋಮಿನಲ್ಲಿ ಒಳ್ಳೆಯವರಿದ್ದರೂ ದೇವರು ಅದನ್ನು ಉಳಿಸುತ್ತಿದ್ದನು.

ಆ ಇಬ್ಬರು ದೂತರು ಸೋದೋಮಿಗೆ ಬಂದು, ಮುಂದಾಗುವ ನಾಶನದ ಕುರಿತು ಲೋಟನಿಗೆ ಎಚ್ಚರ ಕೊಡುವ ರಾತ್ರಿ ಆದದ್ದನ್ನು ನೋಡಿದರೆ (ಆದಿ 19:1–10). ಖಂಡಿತವಾಗಿ, ಆ ಊರಿನವರು ಎಷ್ಟು ರೋಗಗ್ರಸ್ತರೂ, ದುಷ್ಟರೂ ಆಗಿದ್ದರೆಂದು ತಿಳಿಯಬಹುದು. ಅದು ನಿಜವಾಗಿ ದುಷ್ಟತನದಿಂದ ಕೂಡಿ, ಸುತ್ತಲಿದ್ದ ದೇಶಗಳವಂತೆ ಆಗ ಕೆಟ್ಟುಹೋಗಿದ್ದರು. ಆ ದೇಶಗಳವರನ್ನು ಅಲ್ಲಿಂದ ಹೊರಡಿಸಿ ಬಿಡಲು ಇದೂ ಸಹ ಕಾರಣ (ಆದಿ 15:16).

"ಮತ್ತು ಈಗ ಸೊದೋಮಿನ ಕೊನೆಯ ರಾತ್ರಿಯು ಹತ್ತರಿಸುತ್ತಿತ್ತು. ನಾಶನಕ್ಕೆ ಗುರಿಮಾಡಲ್ಪಟ್ಟ ನಗರದ ಮೇಲೆ ಈಗಾಗಲೇ ಪ್ರತಿಕಾರದ ಮೋಡಗಳು ತಮ್ಮ ನೆರಳನ್ನು ಚೆಲ್ಲಿವೆ. ಆದರೆ ಜನರು ಅದನ್ನು ಗ್ರಹಿಸಲಿಲ್ಲ. ದೇವನಿಯಮಿತ ನಾಶನದ ಕಾರ್ಯದ ನಿಮಿತ್ತ ದೇವದೂತರು ಬರುತ್ತಿರುವ ವೇಳೆಯಲ್ಲಿ, ಮನುಷ್ಯರು ಏಳಿಗೆಯಾಗುವ ಮತ್ತು ಸುಖಭೋಗಗಳ ಬಗ್ಗೆ ಕನಸು ಕಾಣುತ್ತಿದ್ದರು. ಆ ಕೊನೆಯ ದಿವಸವು ಕೂಡ ಹಿಂದೆ ಬಂದು ಹೋಗಿರುವ ಪ್ರತಿದಿನದಂತೆಯೇ ಇತ್ತು. ಆ ಚೆಲುವಿಕೆ ಮತ್ತು ಸುರಕ್ಷತೆಯ ನೋಟದ ಮೇಲೆ ಸಂಜೆಯು ಬಿದ್ದಿತು. ಸಾಟಿಯಿಲ್ಲದ ಸೌಂದರ್ಯ ತುಂಬಿದ ಭೂದೃಶ್ಯದ ಮೇಲೆ ಜಾರುತ್ತಿದ್ದ ಸೂರ್ಯನ ಕಿರಣಗಳು ಹೊದ್ದುಕೊಂಡಿತ್ತು. ಆ ಸಂಜೆಯ ತಂಪು ಆ ಪಟ್ಟಣದ ನಿವಾಸಿಗಳನ್ನು ಹೊರಬರ ಮಾಡಿ, ಆ ಘಳಿಗೆಯ ಆನಂದ ಸವಿಯಲು ಸುಖಭೋಗ ಬಯಸುತ್ತಿದ್ದ ಗುಂಪುಗಳು ಅತ್ತಿಂದಿತ್ತ ಓಡಾಡುತ್ತಿದ್ದರು" – ಎಲೆನ್ ಜಿ ವೈಟ್ ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 157, 158.

ಅಂತ್ಯದಲ್ಲಿ ದೇವರು, ಲೋಟ, ಅವನ ಹೆಂಡತಿ ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಮಾತ್ರ (ಆದಿ 19:15) ಅಂದರೆ 10ರಲ್ಲಿ ಅರ್ಧಕ್ಕಿಂತ ಕಮ್ಮಿ ಜನರನ್ನು ಮಾತ್ರ ರಕ್ಷಿಸಿದನು. ಲೋಟನ ಎಚ್ಚರಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ಅಳಿಯಂದಿರು ಆ ಪಟ್ಟಣದಲ್ಲೇ ಉಳಿದರು (ಆದಿ 19:14).

ಆ ಸುಂದರ ದೇಶವು ಆಮೇಲೆ ನಾಶವಾಯಿತು. "ಕೆಡಹುವ" ಹಫಾಖ್ ಎಂಬ ಇಬ್ರಿಯ ಪದವು ಕೆಲವು ಬಾರಿ ಈ ಭಾಗದಲ್ಲಿ ಬಳಸಿದೆ (ಆದಿ 19:21,25,29) ಮತ್ತು ಸೊದೋಮಿನದ ನಾಶನವನ್ನು ವಿವರಿಸುವುದಾಗಿದೆ (ಧರ್ಮೋ 29:23, ಆಮೋಸ 4:11). ಇದರ ಭಾವಾರ್ಥವೇನೆಂದರೆ ಆದೇಶದ ಸ್ಥಿತಿಯು ಹಿಂದಿನ ಸ್ಥಿತಿಗೆ 'ವಿರುದ್ಧವಾಗಿತ್ತು (ತಲೆಕೆಳಗಾಗಿತ್ತು). ಮೂಲ ಸೃಷ್ಟಿಗೆ (ಆದಿ 6:7) ಜಲಪ್ರಳಯವು 'ತಿರುಗು ಮುರುಗು' (ನಾಶನ) ಮಾಡಿದಂತೆ, ಸೊದೋಮಿನ ನಾಶನವು ಏದೇನ್ ತೋಟದ 'ವಿರುದ್ಧ ಸ್ಥಿತಿಯಾಯಿತು (ಆದಿ 13:10). ಸೊದೋಮಿನ ನಾಶನದಲ್ಲಿ ಅಂತ್ಯಕಾಲದ ನಾಶನದ ಮುನ್ನೋಟವನ್ನು ನಮಗೆ ಚಿತ್ರಿಸಲಾಗಿದೆ (ಯೂದನು 7).

**ಶುಕ್ರವಾರ** **ಮೇ 13**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್ ಬರೆದ "*Patriarkhs & Prophets*" ಪುಸ್ತಕದ "*The Law and the Covenants*" ಪುಟ 370–373ನ್ನು ಓದಿರಿ.

ಸೊದೋಮಿನ ಜನರ ಪರವಾಗಿ ಅಬ್ರಹಾಮನು ದೇವರ ಜೊತೆ ಬಹಳ ತಾಳ್ಮೆಯಿಂದ ಮತ್ತು ದೃಢತೆಯಿಂದ ಮಾಡಿದ ಬಿನ್ನಹವು ನಾವು ಸಹ ಕೆಟ್ಟುಹೋದ ಜನರಿಗೋಸ್ಕರ ಪ್ರಾರ್ಥಿಸಲು ಉತ್ತೇಜಿಸಬೇಕು. ಅವರು ಪಾಪದಲ್ಲಿ ಬಿದ್ದು ನಿರೀಕ್ಷೆ ಹೀನಸ್ಥಿತಿಯಲ್ಲಿರಬಹುದು. ಇನ್ನೂ ಹೆಚ್ಚಿನದಾಗಿ ನೋಡಿದರೆ, ದೇವರು ಅಬ್ರಹಾಮನ ಪ್ರಾರ್ಥನೆಯನ್ನು ಲಾಲಿಸಿ, 10 ಜನ ನೀತಿವಂತರ ನಿಮಿತ್ತ ಪಟ್ಟಣವನ್ನು ನಾಶಮಾಡದಿರುವ ಭರವಸೆ ಕೊಟ್ಟಿದ್ದು ಬಹುವಿಶಿಷ್ಟತೆಯ ಸಂಗತಿ.

"(ಅಬ್ರಹಾಮನು) ಆತನು.... ದೇವರಿಂದ ಉಪದೇಶಹೊಂದಿದ್ದರೂ ಸೊದೋಮಿನವರು ಅಷ್ಟು ಕೆಟ್ಟುಹೋದವರೆಂದು ಎಣಿಸಿರಲಿಲ್ಲ. ಅನೀತಿವಂತರೊಂದಿಗೆ ನೀತಿವಂತರು ನಾಶವಾಗಬಾರದೆಂದು ಆತನು ಒಡನೇ ಪ್ರಾರ್ಥನೆ ಮಾಡಲು ಪ್ರಾರಂಭಿಸಿದನು, ಮತ್ತು ಆ ಪಟ್ಟಣದಲ್ಲಿ ಇಂತಿಷ್ಟು ನೀತಿವಂತರು ಉಳಿದಿದ್ದರೆ, ದೇವರು ಅವರ ನಿಮಿತ್ತ ಪಟ್ಟಣವನ್ನು ಉಳಿಸಬೇಕು ಎಂದು ಬೇಡಿಕೊಂಡನು"– ಎಲೆನ್ ಜಿ ವೈಟ್, "The Signs of the Times", ಅಕ್ಟೋಬರ್ 9, 1893.

"ನಾಶವಾಗುವ ಜೀವಾತ್ಮಗಳಿಗಾಗಿ ಇದ್ದ ಪ್ರೀತಿಯು ಅಬ್ರಹಾಮನ ಪ್ರಾರ್ಥನೆಗೆ ಪ್ರೇರಣೆಯಾಯಿತು. ಆ ದುಷ್ಟ ಪಟ್ಟಣದ ಪಾಪಗಳಿಗೆ ಆತನು ಹೇಸಿಕೊಂಡರೂ, ಪಾಪಿಗಳು ರಕ್ಷಣೆ ಹೊಂದಬೇಕೆಂದು ಬಯಸಿದನು. ಸೊದೋಮಿನ ಬಗ್ಗೆ ಆತನಿಗಿದ್ದ ನಮ್ಮಲ್ಲಿರಬೇಕಾದ ಕಾತರತೆಯನ್ನು ವ್ಯಕ್ತಮಾಡುತ್ತದೆ. ನಾವು ಪಾಪದ ವಿರುದ್ಧ ಹಗೆಯನ್ನು ಸಾಧಿಸಬೇಕು, ಆದರೆ ಪಾಪಿಗಳಿಗೆ ಕರುಣೆ ಹಾಗು ಪ್ರೀತಿಯನ್ನು ತೋರಬೇಕು. ನಮ್ಮ ಸುತ್ತಲೂ ಇರುವ ಜೀವಾತ್ಮಗಳು ನಿರೀಕ್ಷೆ ಇಲ್ಲದ, ಅತ್ಯಂತ ಭೀಕರ ನಾಶನಕ್ಕೆ– ಸೊದೋಮಿನ ಮೇಲೆ ಬಿದ್ದಂತ ನಾಶನಕ್ಕೆ ಜಾರಿ ಹೋಗುತ್ತಿರುವರು. ಪ್ರತಿದಿನವೂ ಕೆಲವರ ಪರೀಕ್ಷಣ ಕಾಲವು ಮುಗಿಯುತ್ತಿದೆ. ಪ್ರತಿ ಘಳಿಗೆಯಲ್ಲೂ ಕೆಲವರು ಕೃಪೆಯ ವ್ಯಾಪ್ತಿಗೆ ನಿಲುಕದ ಸ್ಥಿತಿಗೆ ಹೋಗುತ್ತಿರುವರು. ಈ ಭಯಾನಕ ನಾಶನದಿಂದ ಪಾಪಿಯು ಓಡಿ ತಪ್ಪಿಸಿಕೊಳ್ಳುವುದಕ್ಕೆ ಅವರನ್ನು

ಎಚ್ಚರಿಸುವ ಮತ್ತು ಬೇಡಿಕೊಳ್ಳುವ ಸ್ವರಗಳು ಎಲ್ಲಿ ಹೋಗಿವೆ? ಅಂಥವನನ್ನು ಮರಣದಿಂದ ಹಿಂದೆಳೆದುಕೊಳ್ಳಲು ಚಾಚಿಕೊಂಡಿರುವ ಕೈಗಳು ಎಲ್ಲಿವೆ? ಅವನಿಗಾಗಿ ದೇವರ ಬಳಿ ದೀನತೆ ಹಾಗು ಪಟ್ಟುಬಿಡದ ನಂಬಿಕೆಯಿಂದ ಬೇಡಿಕೊಳ್ಳುತ್ತಿರುವವರೆಲ್ಲಿದ್ದಾರೆ? ಅಬ್ರಹಾಮನಿಗಿದ್ದ ಮನಸ್ಸು ಕ್ರಿಸ್ತನ ಮನಸ್ಸೇ ಆಗಿತ್ತು. ದೇವರ ಮಗನು ತಾನೇ ಪಾಪಿಯ ಪರವಾಗಿ ಇರುವ ಮಹಾಮಧ್ಯಸ್ಥನಾಗಿದ್ದಾನೆ. ಯಾವಾತನು ಅದರ ವಿಮೋಚನೆಗಾಗಿ ಬೆಲೆಯನ್ನು ತೆತ್ತನೋ ಅವನಿಗೆ ಮಾನವನ ಜೀವಾತ್ಮದ ಮೌಲ್ಯದ ಅರಿವಿದೆ"– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 140.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮುಗಿಲುಬಿಲ್ಲು ಮತ್ತು ಸುನ್ನತಿಯು "ಒಡಂಬಡಿಕೆಯ ಗುರುತುಗಳಾಗಿವೆ". ಎರಡು ಒಡಂಬಡಿಕೆಗಳ ನಡುವೆ ಇರುವ ಹೋಲಿಕೆಗಳು ಹಾಗು ವ್ಯತ್ಯಾಸಗಳೇನು?

2. ದೇವರು ಕರೆದವನಾದರೂ, ನಂಬಿಕೆಯಿಂದ ಜೀವಿಸುವುದಕ್ಕೆ ಉದಾಹರಣೆಯಾಗಿ ಆಗಾಗ್ಗೆ ಹೊಸ ಒಡಂಬಡಿಕೆಯಲ್ಲಿ ತೋರಿಸಿದ್ದರೂ, ಅಬ್ರಹಾಮನು ಕೆಲವೊಮ್ಮೆ ಎಡವಿದನು? ಈತನ ಉದಾಹರಣೆಯಿಂದ ನಾವೇನು ಕಲಿಯಬೇಕು ಮತ್ತು ಕಲಿಯಬಾರದು?

3. ತಪ್ಪಿಹೋದವರನ್ನು ದೇವರು ದಂಡಿಸುವನೆಂದು ಅನೇಕರು ಒಪ್ಪುವುದಿಲ್ಲ; ಏಕೆಂದರೆ ಹಾಗೆ ಮಾಡುವುದು ದೇವರ ಪ್ರೀತಿಗೆ ವಿರುದ್ಧವಾದದ್ದು ಎಂದು ವಾದಿಸುವರು. ದೇವರು ತಪ್ಪಿಹೋದವರನ್ನು ದಂಡನೆ ಮಾಡುವನೆಂದು ನಂಬುವ ನಾವುಗಳು ಅಂತಹ ವಾದಕ್ಕೆ ನಾವು ಹೇಗೆ ಪ್ರತಿಕ್ರಿಯಿಸಬಹುದು?